ನಿರಂಜನ ಕನ್ನಡ ಸಾಹಿತ್ಯದ ವಿಶಿಷ್ಟ ಧ್ವನಿ: **ನಾಡೋಜ** ಡಾ.ಮಹೇಶ ಜೋಶಿ ವಿಶ್ಲೇಷಣೆ

ಬೆಂಗಳೂರು: ನಿರಂಜನ ಅವರು ಕನ್ನಡದ ವಿಶಿಷ್ಟ ಬರಹಗಾರ ಆಕ್ರೋಶದ ಅಭಿವ್ಯಕ್ತಿಯಲ್ಲಿಯೂ ಸೂಕ್ಷ್ಮತೆಯನ್ನು ತರಬಹುದು ಎಂದು ತೋರಿಸಿ ಕೊಟ್ಟ ಅವರು ಕನ್ನಡದಲ್ಲಿ ಅಂಕಣ ಬರಹಗಳಿಗೆ ಘನತೆ-ಗೌರವಗಳನ್ನು ತಂದವರು. ಸಾಹಿತ್ಯದಲ್ಲಿ ತಾತ್ವಿಕತೆಯನ್ನು ತಂದಾಗಲೂ ಸೃಜನಶೀಲತೆಯ ಕುಶಲತೆ ಮುಕ್ಕಾಗದಂತೆ ನೋಡಿ ಕೊಂಡವರು. ಕಿರಿಯರ ವಿಶ್ವಕೋಶ ಮತ್ತು ವಿಶ್ವಕಥಾಕೋಶಗಳ ಮೂಲಕ ವಿಶ್ವಕೋಶದ ಸಾಧ್ಯತೆಗಳನ್ನು ಕನ್ನಡಕ್ಕೆ ಸಮರ್ಥವಾಗಿ ಪರಿಚಯಿಸಿದವರು, ಹೀಗೆ ನಿರಂಜನ ಅವರ ಸಾಕಷ್ಟು ಅನನ್ಯತೆಗಳನ್ನು ಹೊಂದಿರುವಂತಹದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ಹೇಳಿದರು.

ಅವರು ಇಂದು ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಬರಹಗಾರ ನಿರಂಜನ ಅವರ ಜನ್ಮದಿನದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. 2024 ನಿರಂಜನ ಅವರ ಜನ್ಮ ಶತಮಾನೋತ್ಸವದ ವರ್ಷ ಕೂಡ ಆಗಿರುವುದರಿಂದ ಮಂಡ್ಯದಲ್ಲಿ ನಡೆಯಲಿರುವ 87ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಿರಂಜನರೂ ಸೇರಿದಂತೆ ಈ ವರ್ಷ ಜನ್ಮ ಶತಮಾನೋತ್ಸವ ಆಚರಿಸುತ್ತಿರುವ ಬರಹಗಾರರ ಕುರಿತು ವಿಶೇಷ ಗೋಷ್ಠಿಯನ್ನು ಏರ್ಪಡಿಸಲಾಗುವುದು ಎಂದು ಹೇಳಿದ ನಾಡೋಜ ಡಾ.ಮಹೇಶ ಜೋಶಿಯವರು ಹಾವೇರಿಯಲ್ಲಿ ನಡೆದ 86ನೆಯ ಅಖಿಲ ಭಾರತ ಕನ್ನಡ ಸಮ್ಮೇಳನದಲ್ಲಿಯೂ ಹೀಗೆ ಶತಮಾನದ ಕಂಡ ಸಾಧಕರ ಕುರಿತು ವಿಶೇಷ ಗೋಷ್ಠಿಯನ್ನು ಮಾಡಿದ್ದನ್ನು ನೆನಪು ಮಾಡಿ ಕೊಂಡರು.

ನಿರಂಜನ ಎನ್ನುವುದು ಕುಳಕುಂದ ಶಿವರಾಯರ ಕಾವ್ಯನಾಮ, ಕತೆಗಾರ, ಕಿಶೋರ, ಶಿ.ರಾ.ಕುಳಕುಂದ, ಕುಳಕುಂದ ಶಿವರಾಯ ಹೀಗೆ ಹಲವು ಹೆಸರುಗಳಿಂದ ಅವರು ಬರೆದಿದ್ದೂ ಇದೆ. ಅವರದು ಹೋರಾಟದ ಬದುಕು, ಜೀವನದ ಹೋರಾಟದಲ್ಲಿ ನಿರಂಜನ ಪತ್ರಿಕೋದ್ಯಮದ ಕಡೆಗೆ ಬಂದರು. ಹದಿನೇಳರ ಎಳೆಯ ವಯಸ್ಸಿನಲ್ಲಿಯೇ ಜೀವನದ ಅನಿವಾರ್ಯತೆಯಲ್ಲಿ 'ರಾಷ್ಟ್ರಬಂಧು'ಪತ್ರಿಕೆಯ ಸಂಪಾದಕೀಯ ಬಳಗ ಸೇರಿದರು. ಮುಂದೆ 'ತಾಯಿ ನಾಡು', 'ಜನವಾಣಿ', 'ಸಂಯುಕ್ತ ಕರ್ನಾಟಕ', 'ವಾಹಿನಿ ಪತ್ರಿಕೆ' ಮುಂತಾದವುಗಳಲ್ಲಿ ಕೆಲಸ ಮಾಡಿದರು. ಅವರು ದೀರ್ಘಕಾಲ, ಮತ್ತು ಕ್ರಿಯಾಶೀಲ ಪತ್ರಕರ್ತರಾಗಿ ಕೆಲಸ ಮಾಡಿದ್ದು 'ಪ್ರಜಾಮತ'ದಲ್ಲಿ. ಭಾರತೀಯ ಕಮ್ಯುನಿಸ್ಟ್ ಪಕ್ಷವು ಹುಬ್ಬಳ್ಳಿಯಲ್ಲಿ 'ಜನಶಕ್ತಿ' ಪ್ರಕಟಿಸಲು ಪ್ರಾರಂಭವಾದಾಗ ಶಿವರಾಯರಿಗೆ ಆಹ್ವಾನ ಹೋಯಿತು. ಪತ್ರಿಕೆ ಆರಂಭವಾದ ಒಂದೇ ವರ್ಷದಲ್ಲಿ ನಿಷೇಧಿಸಲ್ಪಟ್ಟಿತು. ಶಿವರಾಯರು ಮೂರು ವರ್ಷಕಾಲ ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಸದಸ್ಯರಾಗಿದ್ದು ತೆಲಂಗಾಣ ಚಳವಳಿ ಬಗ್ಗೆ ಭಾಷಣ ಮಾಡುವುದು, ಬರೆಯುವುದು ಮಾಡುತ್ತಾ ಭೂಗತ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಕುಳಕುಂದ ಶಿವರಾಯರು 'ನಿರಂಜನ' ಎಂಬ ಗುಪ್ತನಾಮವನ್ನು ಧರಿಸಿದ್ದು ಆಗಲೇ! ಮುಂದೆ ಇದೇ ಸಾಹಿತ್ಯ ಪ್ರಪಂಚದಲ್ಲಿ ಪ್ರಸಿದ್ಧ ಹೆಸರಾಯಿತು.

1964ರ ಅಕ್ಟೋಬರ್ 26ರಿಂದ 1965ರ ಡಿಸಂಬರ್ 5ರವರೆಗೆ ನಿರಂಜನ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಕೂಡ ಕಾರ್ಯ ನಿರ್ವಹಿಸಿದರು ಅದು ಬಿ.ಶಿವಮೂರ್ತಿ ಶಾಸ್ತ್ರಿಗಳು ಅಧ್ಯಕ್ಷರಾಗಿದ್ದ ಕಾಲ, ನಿರಂಜನ ಬಹು ಮುಖ್ಯವಾಗಿ ಪರಿಷತ್ತಿನ ತಾತ್ವಿಕ ಸ್ವರೂಪದಲ್ಲಿ ಬದಲಾವಣೆಯನ್ನು ಮಾಡಲು ಪ್ರಯತ್ನಿಸಿದರು ಎಂದು ನಿರಂಜನ ಅವರ ಕೊಡುಗೆಗಳನ್ನು ನೆನಪು ಮಾಡಿ ಕೊಂಡ ನಾಡೋಜ ಡಾ.ಮಹೇಶ ಜೋಶಿಯವರು, ತಾವು ನಿರಂಜನ ಅವರನ್ನು ಭೇಟಿ ಮಾಡಿದ್ದ ಸಂದರ್ಭಗಳನ್ನು ನೆನಪು ಮಾಡಿ ಕೊಂಡು ಅವರ ಕುಟುಂಬದ ಜೊತೆ ತಮಗಿದ್ದ ನಿಕಟತೆಯನ್ನು ಸ್ಮರಿಸಿ ಕೊಂಡರು. ಅವರ ಪ್ರಖ್ಯಾತ ಕಾದಂಬರಿ 'ಚಿರಸ್ಮರಣೆ'ಯನ್ನು ತಾವು ದೂರದರ್ಶನದಲ್ಲಿದ್ದಾಗ ಧಾರಾವಾಹಿಯಾಗಿಸಿದ ಅನುಭವವನ್ನು ಸ್ಮರಿಸಿ ಕೊಂಡರು.

ಪ್ರಕಟಣಾ ವಿಭಾಗದ ಸಂಚಾಲಕರಾದ  ಎನ್.ಎಸ್.ಶ್ರೀಧರ ಮೂರ್ತಿಯವರು ಮಾತನಾಡಿ 'ಕರ್ಣಾಟಕ ಸಹಕಾರೀ ಪ್ರಕಾಶನ' ಎಂಬ ಸಂಸ್ಥೆಯು ಕಿರಿಯರಿಗಾಗಿ ವಿಶ್ವಕೋಶವೊಂದನ್ನು ತಯಾರಿಸುವ ಯೋಜನೆ ಹಾಕಿಕೊಂಡಾಗ ಅದರ ಸಂಪೂರ್ಣ ಜವಾಬ್ದಾರಿ ಹೊರಲು ಮುಂದಾದವರು ನಿರಂಜನ.  ಕೇವಲ ನಾಲ್ಕು ವರ್ಷ ಒಂಬತ್ತು ತಿಂಗಳಲ್ಲಿ 'ಜ್ಞಾನಗಂಗೋತ್ರಿ'ಯ ಎಲ್ಲ ಸಂಪುಟಗಳನ್ನೂ ಸಿದ್ಧಪಡಿಸಿ, ಇಪ್ಪತ್ತು ಸಾವಿರ ಪ್ರತಿಗಳನ್ನೂ ಅಚ್ಚುಮಾಡಿಸಿ, ವಿತರಣೆಯನ್ನೂ ವ್ಯವಸ್ಥೆಗೊಳಿಸಿದ್ದು ನಿರಂಜನರ ಕಾರ್ಯದಕ್ಷತೆ, ಶಿಸ್ತು, ಸಾಧನೆಗಳಿಗೆ ಉಜ್ವಲ ನಿದರ್ಶನ. 1980-83ರ ಅವಧಿಯಲ್ಲಿ, ಬೆಂಗಳೂರಿನ ನವಕರ್ನಾಟಕ ಪ್ರಕಾಶನ ಸಂಸ್ಥೆಯವರಿಗಾಗಿ, ನಾನಾದೇಶಗಳಿಂದ, ನಾನಾಭಾಷೆಗಳಿಂದ ಆಯ್ದ ಸುಮಾರು ನಾಲ್ಕುನೂರು ಸಣ್ಣಕಥೆಗಳನ್ನು ನಿರಂಜನರು ಇಪ್ಪತ್ತೈದು ಸಂಪುಟಗಳಲ್ಲಿ ಸಂಪಾದಿಸಿಕೊಟ್ಟರು' ಎಂದು ಅವರ ಕೊಡುಗೆಗಳನ್ನು ನೆನಪು ಮಾಡಿಕೊಂಡರು.

ಕನ್ನಡ ಸಾಹಿತ್ಯ  ಪರಿಷತ್ತಿನ ಕಾರ್ಯದರ್ಶಿಗಳಾದ ಡಾ.ಪದ್ಮಿನಿ ನಾಗರಾಜು ಅವರು ಮಾತನಾಡಿ' ನಿರಂಜನಹತ್ತು ಕಥಾ ಸಂಗ್ರಹಗಳು, ಇಪ್ಪತ್ತೈದು ಕಾದಂಬರಿಗಳು, ಮೂರು ನಾಟಕಗಳು, ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಜ್ಞಾನಗಂಗೋತ್ರಿಯ ಏಳು ಸಂಪುಟಗಳು, ವಿಶ್ವಕಥಾಕೋಶದ ಇಪ್ಪತ್ತೈದು ಸಂಪುಟಗಳು, ಪ್ರಸಿದ್ಧ  ಅಂಕಣಗಳ ಸಂಗ್ರಹಗಳು, ಹಲವಾರು ವಿಚಾರಪೂರ್ಣ ಚಿಂತನಾ ಪ್ರಕಟಣೆಗಳು  ಮುಂತಾದವುಗಳನ್ನೆಲ್ಲಾ ಒಟ್ಟು ಮಾಡಿ ನೋಡಿದಾಗ ಅವರು ತಮ್ಮ ಇನ್ನಿತರ ಬಿಡುವಿಲ್ಲದ ಕೆಲಸದೊಡನೆ ಸಾಧಿಸಿದ ಈ ಅಗಾಧತೆಯ ಪರಿ ಅಚ್ಚರಿ ಹುಟ್ಟಿಸುತ್ತದೆ.' ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗಶೆಟ್ಟಿ, ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ್ ಪಾಂಡು ಮತ್ತು ಪರಿಷತ್ತಿನ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಎನ್.ಎಸ್.ಶ್ರೀಧರ ಮೂರ್ತಿ

ಸಂಚಾಲಕರು, ಪ್ರಕಟಣಾ ವಿಭಾಗ

ಕನ್ನಡ ಸಾಹಿತ್ಯ ಪರಿಷತ್ತು